ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಸುಮಪ : 2017–18 ದಿನಾಂಕ: 31–10–2017

# ಮಾಧ್ಯಮ ಸಂಸ್ಥೆಗಳ ಮುಖ್ಯಸ್ಥರ ಗಮನಕ್ಕೆ

ಬೆಳಗಾವಿಯಲ್ಲಿ ನವೆಂಬರ್ 13 ರಿಂದ ನಡೆಯಲಿರುವ ವಿಧಾನ ಮಂಡಲದ ಅಧಿವೇಶನ ವರದಿ ಮಾಡಲು ಬೆಂಗಳೂರಿನಿಂದ ನಿಯೋಜಿಸುವ ರಾಜ್ಯಮಟ್ಟದ ಸುದ್ದಿ ವಾಹಿನಿಗಳು ಹಾಗೂ ದಿನ ಪತ್ರಿಕೆಗಳ ಮಾನ್ಯತೆ ಪಡೆದ ಪತ್ರಕರ್ತರು ಹೆಸರುಗಳನ್ನು ವಾರ್ತಾ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಯಲ್ಲಿ ಶ್ರೀ ಜಡಿಯಪ್ಪ ಗೆದ್ಲಗಟ್ಟಿ ಅವರ ಬಳಿ ನೋಂದಾಯಿಸಲು ಕೋರಿದೆ. ನೋಂದಾಯಿಸಿದ ಮಾಧ್ಯಮ ಪ್ರತಿನಿಧಿಗಳಿಗೆ ಬೆಳಗಾವಿ ಜಿಲ್ಲಾಡಳಿತವು ಒದಗಿಸುವ ಹೋಟೆಲ್ ಕೊಠಡಿಗಳನ್ನು ನೀಡಲಾಗುವುದು.

- ವಸತಿ ಸೌಲಭ್ಯವು ಕಡಿಮೆ ಇರುವ ಕಾರಣ ವಿದ್ಯುನ್ಮಾನ ಮಾಧ್ಯಮದ 6 ಪ್ರತಿನಿಧಿಗಳಿಗೆ(ವರದಿಗಾರರು, ಕ್ಯಾಮರಾಮನ್‌ಗಳು ಹಾಗೂ ತಾಂತ್ರಿಕ ಸಿಬ್ಬಂದಿ ಸೇರಿದಂತೆ) 3 ಡಬ್ಬಲ್ ರೂಂಗಳನ್ನು ಒದಗಿಸಲಾಗುವುದು.
- ಮುದ್ರಣ ಮಾಧ್ಯಮದ 4 ಪ್ರತಿನಿಧಿಗಳಿಗೆ 2 ಡಬ್ಬಲ್ ರೂಂಗಳನ್ನು ಒದಗಿಸಲಾಗುವುದು.
- ಬೆಳಗಾವಿಯ ವರದಿಗಾರರನ್ನು ಹೊರತುಪಡಿಸಿ ಇತರೆ ಜಿಲ್ಲೆಗಳ ಮಾನ್ಯತೆ ಪಡೆದ ಪತ್ರಕರ್ತರನ್ನು ನಿಯೋಜಿಸಿದಲ್ಲಿ ಪತ್ರಕರ್ತರು ಸೇರಿದಂತೆ ಮೇಲೆ ತಿಳಿಸಿದ ಸಂಖ್ಯೆಗೆ ಸೀಮಿತಗೊಳಿಸಲು ಕೋರಿದೆ.
- ತಾಂತ್ರಿಕ ಸಿಬ್ಬಂದಿ ಹಾಗೂ ಒ.ಬಿ. ವಾಹನಗಳ ಪ್ರವೇಶ ಪತ್ರಗಳನ್ನು ಪಡೆಯುವುದು ಆಯಾ ಸಂಸ್ಥೆಯದ್ದೇ ಜವಾಬ್ದಾರಿಯಾಗಿರುತ್ತದೆ.
- ಬೆಳಗಾವಿ ಹೊರತುಪಡಿಸಿ ಇತರೆ ಜಿಲ್ಲೆಗಳಿಂದ ಆಗಮಿಸುವ ಪತ್ರಕರ್ತರಿಗೆ ವಿಧಾನಸಭೆ/ವಿಧಾನ ಪರಿಷತ್ತಿನ ಪ್ರವೇಶ ಪತ್ರಗಳ ಅಗತ್ಯವಿದ್ದಲ್ಲಿ ಈ ಕಛೇರಿಗೆ ಪ್ರತ್ಯೇಕ ಮನವಿ ಸಲ್ಲಿಸಲು ಕೋರಿದೆ.
- ಬೆಂಗಳೂರಿನ ಪತ್ರಕರ್ತರಿಗೆ ಈಗಾಗಲೇ ನೀಡಿರುವ 2017 ರ ಡಿಸೆಂಬರ್ ಅವಧಿ ಇರುವ ಪ್ರವೇಶಪತ್ರವೇ ಅನ್ವಯವಾಗುತ್ತದೆ.
- ವಸತಿಗಾಗಿ ಹೆಸರು ನೋಂದಾಯಿಸಲು 2017 ನವೆಂಬರ್ 2 ಕೊನೆಯ ದಿನ. ವಸತಿ ಸೌಲಭ್ಯ ಕಲ್ಪಿಸಲು ಪೂರ್ವಸಿದ್ದತೆ ಅಗತ್ಯವಿರುವುದರಿಂದ ಕೊನೆಯ ದಿನಾಂಕದ ನಂತರ ಬಂದ ಮನವಿಗಳನ್ನು ಸ್ವೀಕರಿಸಲಾಗುವುದಿಲ್ಲ.
- ಸಂಸ್ಥೆಯ ಮುಖ್ಯಸ್ಥರು ಅಧಿವೇಶನದಲ್ಲಿ ಭಾಗವಹಿಸುವ ಪತ್ರಕರ್ತರ ಹೆಸರು, ಹುದ್ದೆ, ದೂರವಾಣಿ ಸಂಖ್ಯೆ ಮೊದಲಾದ ವಿವರಗಳನ್ನು ನಮೂದಿಸಿ ಶಿಫಾರಸ್ಸು ಪತ್ರವನ್ನು ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಕಳುಹಿಸಲು ಕೋರಿದೆ.
- ಹೆಚ್ಚಿನ ಮಾಹಿತಿಗೆ ಶ್ರೀ ಜಡಿಯಪ್ಪ ಗೆದ್ಲಗಟ್ಟಿ (22028011) ಇವರನ್ನು ಸಂಪರ್ಕಿಸಬಹುದು.

(ಡಾ. ಹರ್ಷ ಪಿ.ಎಸ್.)
ನಿರ್ದೇಶಕರು

# ಪತ್ರಿಕಾ ಅಮಂತ್ರಣ

1. **ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ಮೇಳ ಸಮಾರಂಭ:**

**ಧ್ವಜಾರೋಹಣ:**
**ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ**

**ದಿನಾಂಕ: 01–11–2017, ಬುಧವಾರ ಸಮಯ : ಬೆಳಿಗ್ಗೆ 9–00 ಗಂಟೆಗೆ**

**ಸ್ಥಳ: ಕಂಠೀರವ ಕ್ರೀಡಾಂಗಣ, ಬೆಂಗಳೂರು.**

2. **ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ:**

**ಪ್ರಶಸ್ತಿ ಪ್ರದಾನ:**
**ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ**

**ಮುಖ್ಯ ಅತಿಥಿ:**
**ಅನಂತಕುಮಾರ್, ಕೇಂದ್ರ ರಾಸಾಯನಿಕ, ರಸಗೊಬ್ಬರ ಮತ್ತು ಸಂಸದೀಯ ವ್ಯವಹಾರಗಳ ಸಚಿವರು.**

**ಅಧ್ಯಕ್ಷತೆ:**
**ಆರ್.ವಿ. ದೇವರಾಜು, ಅಧ್ಯಕ್ಷರು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಹಾಗೂ ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ.**

**ದಿನಾಂಕ: 01–11–2017, ಬುಧವಾರ ಸಮಯ : ಸಂಜೆ 6.30 ಗಂಟೆಗೆ**

**ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.**

ಸಂಖ್ಯೆ 238/358

**ಪತ್ರಿಕಾ ಪ್ರಕಟಣೆ**

# ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ಸಮಾರಂಭ

ಬೆಂಗಳೂರು, ಅಕ್ಟೋಬರ್ 31 (ಕರ್ನಾಟಕ ವಾರ್ತೆ)

ಸಾರ್ವಜನಿಕ ಶಿಕ್ಷಣ ಇಲಾಖೆಯು ನವೆಂಬರ್ 1 ರಂದು ನಗರದ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ರಾಜ್ಯ ಮಟ್ಟದ ಕರ್ನಾಟಕ ರಾಜ್ಯೋತ್ಸವ ಹಾಗೂ ಮಕ್ಕಳ ಮೇಳ ಸಮಾರಂಭವನ್ನು ನವೆಂಬರ್ 1 ರ ಬುಧವಾರದಂದು ಬೆಳಿಗ್ಗೆ 9.00 ಗಂಟೆಗೆ ಹಮ್ಮಿಕೊಂಡಿದೆ.

ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಧ್ವಜಾರೋಹಣ ಮಾಡಿ, ರಾಜ್ಯೋತ್ಸವ ಸಂದೇಶವನ್ನು ನೀಡಲಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ ಕಾರ್ಯಕ್ರಮವನ್ನು ಸಾದರಪಡಿಸುತ್ತಿದ್ದು, 80 ಶಾಲೆಗಳ ಒಟ್ಟು 9,000 ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಕನ್ನಡ ನಾಡು, ನುಡಿ, ನೆಲ, ಜಲ, ದೇಶಾಭಿಮಾನಕ್ಕೆ ಸಂಬಂಧಿಸಿದ ನೃತ್ಯ ರೂಪಕಗಳು, ಸಾಮೂಹಿಕ ಕವಾಯತು ಹಾಗೂ ಯೋಗ ಪ್ರದರ್ಶನವನ್ನು ನಡೆಸಿಕೊಡುವರು.

ಯುವ ಜನಾಂಗದ ಅಭಿವೃದ್ಧಿಯ ಮೂಲಕ ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಪೂರಕವಾಗುವ ಭಾರತೀಯ ಮೂಲದ ಸೂಪರ್‌ಬ್ರೈನ್ ಯೋಗವನ್ನು ಶಿಕ್ಷಣ ಇಲಾಖೆಯು ಪರಿಚಯಿಸಿ ಅಳವಡಿಸುವ ಮಹತ್ವದ ಕಾರ್ಯಕ್ಕೆ ಚಾಲನೆ ದೊರೆತಿರುವುದು ದೇಶದಲ್ಲಿಯೇ ಮೊದಲು. ರಾಜ್ಯ ಸರ್ಕಾರವು ಈ ಯೋಗವನ್ನು ಗುರುತಿಸಿ, ಪ್ರೋತ್ಸಾಹಿಸಿ, ಬೆಂಗಲಿಸುತ್ತಿರುವುದು ಯುವ ಜನಾಂಗಕ್ಕೆ ನೀಡುತ್ತಿರುವ ರಾಜ್ಯೋತ್ಸವದ ವಿಶೇಷ ಕೊಡುಗೆಯಾಗಿದೆ. ಈ ಕಾರ್ಯಕ್ರಮಗಳಲ್ಲಿ ಸಾರ್ವತ್ರಿಕವಾಗಿ 10,000 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗ ಏಕಕಾಲದಲ್ಲಿ ಪ್ರಾಯೋಗಿಕ ಅಭ್ಯಾಸದ ಮೂಲಕ ಚಾಲನೆ ನೀಡಲಾಗುತ್ತಿದ್ದು, ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆಗಳೂ, ಇಲಾಖೆಯವರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

**ಕನ್ನಡ ರಾಜ್ಯೋತ್ಸವಕ್ಕೆ – ಚಿತ್ರಕಲಾ ಉತ್ಸವ:**

ಸನ್ಮಾನ್ಯ ಮುಖ್ಯಮಂತ್ರಿವರ ಮಾರ್ಗದರ್ಶನದಂತೆ, ಕನ್ನಡ ನಾಡಿಕ ಖ್ಯಾತ ಕಲಾವಿದರು ಕನ್ನಡದ ಕುರಿತ ಚಿತ್ರ ಕಲಾಕೃತಿಗಳು, ಮಕ್ಕಳಿಗೆ ಮಾರ್ಗದರ್ಶನ ಹಾಗೂ ಕನ್ನಡ ವಾತಾವರಣದ ಅನಾವರಣವನ್ನು ಕಲಾಕೃತಿಗಳ ಮೂಲಕ ಮಾಡಿರುವುದು ಈ ಬಾರಿಯ ವಿಶೇಷತೆಯಾಗಿದೆ. ಅನೇಕ ಕನ್ನಡ ಶಾಲೆಯ ಮಕ್ಕಳು ಮತ್ತು ಕಲಾವಿದರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.

ಎಸ್‌ಎಂ.ಜಿಪಿಆರ್.

ಸಂಖ್ಯೆ 239/359

## ಸರ್ಕಾರದ ಎರಡು ಮೊಬೈಲ್ ಆ್ಯಪ್‌ಗಳಿಗೆ ಮುಖ್ಯಮಂತ್ರಿಗಳಿಂದ ಚಾಲನೆ

ಬೆಂಗಳೂರು, ಅಕ್ಟೋಬರ್ 31 (ಕರ್ನಾಟಕ ವಾರ್ತೆ)

ಮುಖ್ಯಮಂತ್ರಿಗಳು ತಮ್ಮ ಜನಸಂಪರ್ಕ ಕಾರ್ಯಕ್ರಮದ ಮಾಹಿತಿ ಹಾಗೂ ರೈತ ಬೆಳೆ ಸಮೀಕ್ಷೆ ಕುರಿತ ಎರಡು ಮೊಬೈಲ್ ಆ್ಯಪ್‌ಗಳಿಗೆ ಇಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಚಾಲನೆ ನೀಡಿದರು.

ದಿ ಸಿಟಿಜನ್ ಕನೆಕ್ಟ್ ಆ್ಯಪ್ ಹೆಸರಿನ ಈ ಜನಸಂಪರ್ಕ ಆ್ಯಪ್‌ನಲ್ಲಿ ಸರ್ಕಾರದ ಸಾಧನೆ, ಜನರ ಕುಂದುಕೊರತೆಗಳ ಪರಿಹಾರ, ಮುಖ್ಯಮಂತ್ರಿಗಳ ಭಾಷಣ, ವಿಡಿಯೋ ಸಂದರ್ಶನ, ದಿನನಿತ್ಯದ ಕಾರ್ಯಕ್ರಮ, ವರದಿಗಳು ಲಭ್ಯವಿದೆ. ಸಾರ್ವಜನಿಕರು ಮುಖ್ಯಮಂತ್ರಿಗಳು ಈ ಆ್ಯಪ್ ಮೂಲಕ ನೇರವಾಗಿ ಸಹ ಸಂಪರ್ಕಿಸಬಹುದಾಗಿದೆ. ಸರ್ಕಾರದ ಯೋಜನೆಗಳನ್ನು ಆ್ಯಪ್ ಸಮರ್ಪಕವಾಗಿ ತಲುಪಿಸುವ ಹಾಗೂ ಪಾರದರ್ಶಿಕ ಆಡಳಿತ ನೀಡುವ ನಿಟ್ಟಿನಲ್ಲಿ ಈ ಆ್ಯಪ್ ಸಹಕಾರಿಯಾಗಿದೆ. ಈ ಆ್ಯಪ್‌ನನ್ನು ಇಂಗ್ಲೀಷ್ ಹಾಗೂ ಕನ್ನಡ ಎರಡರಲ್ಲೂ ಸಿದ್ಧಪಡಿಸಲಾಗಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ಮಾನ್ಯ ಮುಖ್ಯಮಂತ್ರಿಗಳು ಈ ಎರಡು ಆ್ಯಪ್‌ಗಳಿಂದ ಜನಸಾಮಾನ್ಯರಿಗೆ ಬಹಳಷ್ಟು ಪ್ರಯೋಜನವಾಗಲಿದೆ. ಜನಸಂಪರ್ಕ

ಆ್ಯಪ್‌ನಲ್ಲಿ ಜನರು ಸರ್ಕಾರಕ್ಕೆ ಸಲಹೆ, ಸೂಚನೆಗಳನ್ನು ನೀಡಬಹುದು. ಇದರಿಂದ ಪ್ರಜಾಪ್ರಭುತ್ವದ ಯಶಸ್ಸು ಸಾಧ್ಯ. ಸಾರ್ವಜನಿಕರ ಪಾಲ್ಗೊಳ್ಳುವಿಕೆಯಿಂದ ನವ ಕರ್ನಾಟಕ ನಿರ್ಮಾಣ – 2022 ಕ್ಕೆ ಮುನ್ನುಡಿ ಹಾಕಬಹುದು. ಇದು ಡಿಜಿಟಲ್ ಯುಗವಾಗಿರುವುದರಿಂದ ರೈತರಿಗೆ ಕೃಷಿಗೆ ಸಂಬಂಧಿಸಿದ ಮಾಹಿತಿ ಜನರಿಗೆ ಬೇಗ ತಲುಪುತ್ತದೆ ಎಂದರು.

ರೈತರ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್‌ನ ಕುರಿತು ಮಾತನಾಡಿದ ಕೃಷಿ ಸಚಿವರಾದ ಕೃಷ್ಣ ಬೈರೇಗೌಡ, 2017–18 ನೇ ಸಾಲಿನಲ್ಲಿ ಖಾರಿಫ್ ಹಂಗಾಮಿನ ಬೆಳೆ ಸಮೀಕ್ಷೆ ಕೈಗೊಳ್ಳಲಾಗುತ್ತಿದ್ದು, ಇದಕ್ಕೆ 15 ಸಾವಿರ ಅಧಿಕಾರಿ, ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಅಧಿಕಾರಿಗಳು ಜಿ.ಪಿ.ಎಸ್. ಸಂಯೋಜನರೊಂದಿಗೆ ಜಮೀನಿನಲ್ಲಿ ಬೆಳದ ಬೆಳೆಗಳ ವಿವರಗಳನ್ನು ಸಂಗ್ರಹಿಸುವರು. ಈ ದತ್ತಾಂಶ ಸಂಗ್ರಹ ಕೆಲಸ ಈ ಮೊಬೈಲ್ ಆ್ಯಪ್‌ನಿಂದ ಸಾಧ್ಯ. ಇದರಿಂದ ಕನಿಷ್ಠ ಬೆಂಬಲ ಬೆಲೆ ಸೌಲಭ್ಯ ವಿವರಣೆ ಪರಿಣಾಮಕಾರಿಯಾಗಲಿದೆ. ಪ್ರಕೃತಿ ವಿಕೋಪದಲ್ಲಿ ರೈತರ ಬೆಳೆ ಪರಿಹಾರ ಬೆಳೆ ವಿಮಾ ನೀಡುವುದು, ಬೆಳೆಗಳನ್ನು ಆರ್‌ಟಿಸಿ ದಾಖಲಿಸುವಲ್ಲಿ ಸಹ ಇದು ಸಹಕಾರಿಯಾಗಿದೆ, ಇದು ರೈತರ ಸಬಲೀಕರಣಕ್ಕೆ ಹೆಚ್ಚು ಸಹಕಾರಿಯಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಚಿವರಾದ ಪ್ರಿಯಾಂಕ್ ಖರ್ಗೆ, ಕೆ.ಜೆ. ಜಾರ್ಜ್, ಟಿ.ಬಿ. ಜಯಚಂದ್ರ, ಸಂಸದೀಯ ಕಾರ್ಯದರ್ಶಿಗಳಾದ ಗೋವಿಂದರಾಜು, ಅಪರ ಮುಖ್ಯ ಕಾರ್ಯದರ್ಶಿಗಳಾದ ವಿಜಯಭಾಸ್ಕರ್, ರತ್ನಪ್ರಭ, ಅಜಯ್ ಸೇಠ್, ಇ–ಆಡಳಿತದ ಪ್ರಧಾನ ಕಾರ್ಯದರ್ಶಿಗಳಾದ ರಾಜೀವ್ ಚಾವ್ಲಾ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ಮಣಿವಣ್ಣನ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳಾದ ಡಾ. ಎಲ್.ಕೆ. ಅತೀಕ್ ಅವರು ಉಪಸ್ಥಿತರಿದ್ದರು. ವಾರ್ತಾ ಇಲಾಖೆ ನಿರ್ದೇಶಕರಾದ ಡಾ.ಪಿ.ಎಸ್.ಹರ್ಷ ವಂದನಾರ್ಪಣೆ ಸಲ್ಲಿಸಿದರು.

ಎಸ್‌ಎಂ:ಕೆಎನ್‌ಕೆ:ಜಿಪಿಆರ್.

ಸಂಖ್ಯೆ 240/360

## ಮುಂದಿನ ವರ್ಷದಲ್ಲಿ ಜಾಲತಾಣಗಳು ಸಂಪೂರ್ಣ ಕನ್ನಡೀಕರಣವಾಗಲು ಸರ್ಕಾರದಿಂದ ಎಲ್ಲಾ ರೀತಿಯ ಸಹಕಾರ – ಮುಖ್ಯಮಂತ್ರಿ

ಬೆಂಗಳೂರು, ಅಕ್ಟೋಬರ್ 31 (ಕರ್ನಾಟಕ ವಾರ್ತೆ)

ಮುಂದಿನ ವರ್ಷದಲ್ಲಿ ಜಾಲತಾಣಗಳು ಸಂಪೂರ್ಣ ಕನ್ನಡೀಕರಣವಾಗಲು ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇಂದು ಏರ್ಪಡಿಸಿದ್ದ ಕರ್ನಾಟಕ ಸರ್ಕಾರದ ಜಾಲತಾಣಗಳಲ್ಲಿ ಕನ್ನಡ ಬಳಕೆ, ಶಿಷ್ಟತೆ, ಏಕರೂಪತೆ ಮತ್ತು ಸುಲಭಗ್ರಾಹ್ಯತೆ ಕುರಿತ ವರದಿ ಸ್ವೀಕರಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾಲತಾಣಗಳಲ್ಲಿ ಕನ್ನಡ ಬಳಕೆಯಾಗಬೇಕು ಎಂಬುದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಆಶಯ ಮಾತ್ರವಲ್ಲ ಸರ್ಕಾರದ ಆಶಯವೂ ಅದೇ ಆಗಿದೆ ಎಂದು ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾತರವು ಕನ್ನಡ ರಾಜ್ಯೋತ್ಸವದ ಮುನ್ನಾದಿನವಾದ ಇಂದು ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ವರದಿಯಲ್ಲಿ ಯಾವ ಶಿಫಾರಸ್ಸುಗಳಿವೆ ಎಂಬುದನ್ನು ಓದಿದ ನಂತರ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಜಾರಿಗೊಳಿಸುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಇಂದು ನಾವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿನ ಶಿಫಾರಸ್ಸುಗಳನ್ನು ಸರ್ಕಾರಿ ಕಚೇರಿಗಳಲ್ಲಿ ಅಳವಡಿಸಿಕೊಂಡರೆ ಆಡಳಿತ ಇನ್ನಷ್ಟು ಜನಸ್ನೇಹಿ ಆಗಲಿದೆ ಎಂದು ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಎಸ್. ಜಿ. ಸಿದ್ದರಾಮಯ್ಯ ಅವರು ಕನ್ನಡ ಜೀವಂತ ಭಾಷೆ ಅದು ಹೊಸ ಜ್ಞಾನ ಶಾಖೆಗಳಿಗೆ ತೆರೆದುಕೊಳ್ಳಬೇಕು. ಇಂದಿನ ಯುವ ಪೀಳಿಗೆ ಪ್ರಯೋಗಶೀಲವಾಗಿರುವುದರಿಂದ ಹೊಸ ಜ್ಞಾನ ಶಾಖೆಗೆ ತೆರೆದುಕೊಳ್ಳಲು ಯುವಕರು ಪ್ರಯತ್ನಶೀಲರಾಗಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಅಭಿಪ್ರಾಯ ವ್ಯಕ್ತಪಡಿಸಿದರು.

ಬೆಂಗಳೂರು ನಗರಾಭಿವೃದ್ಧಿ ಸಚಿವ ಕೆ. ಜೆ. ಜಾರ್ಜ್ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಕೆ. ರತ್ನಪ್ರಭ, ತಂತ್ರಾಂಶ ತಜ್ಞರಾದ ಬೇಳೂರು ಸುದರ್ಶನ್, ಅಪರ ಮುಖ್ಯಕಾರ್ಯದರ್ಶಿ ರಾಜೀವ್ ಚಾವ್ಲಾ, ಸಾಹಿತಿಗಳಾದ ಚಂದ್ರಶೇಖರ ಪಾಟೀಲ, ಡಾ. ಸಿದ್ದಲಿಂಗಯ್ಯ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ. ಕೆ. ಮುರಳುಸಿದ್ದಪ್ಪ ಹಾಗೂ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು, ಸಾಹಿತಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಎಸ್‌ಎಂ:ಕೆಪಿಪಿ:ಜಿಪಿಆರ್.

ಸಂಖ್ಯೆ 241/361

## ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಜನ್ಮ ದಿನದ ಅಂಗವಾಗಿ ಮುಖ್ಯಮಂತ್ರಿ ಅವರಿಂದ ಪ್ರತಿಜ್ಞಾ ವಿಧಿ ಬೋಧನೆ.

ಬೆಂಗಳೂರು, ಅಕ್ಟೋಬರ್ 31 (ಕರ್ನಾಟಕ ವಾರ್ತೆ)

ದಿವಂಗತ ಸರ್ದಾರ್ ವಲ್ಲಭಬಾಯ್‌ಪಟೇಲ್ ಅವರ ಜನ್ಮ ದಿನದ ಅಂಗವಾಗಿ ಇಂದು ಏರ್ಪಡಿಸಿದ್ದ "ರಾಷ್ಟ್ರೀಯ ಏಕತಾ ದಿವಸದ' ಪ್ರತಿಜ್ಞಾ ವಿಧಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬೋಧಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದ ಮುಖ್ಯಮಂತ್ರಿಗಳು ರಾಷ್ಟ್ರದ ಐಕ್ಯತೆ, ಸಮಗ್ರತೆ ಮತ್ತು ಭದ್ರತೆಯನ್ನು ಕಾಪಾಡಲು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ, ಸರ್ದಾರ್ ವಲ್ಲಭಬಾಯ್‌ಪಟೇಲ್ ಅವರ ದೂರದೃಷ್ಠಿ ಮತ್ತು ಕಾರ್ಯಕ್ಷಮತೆಯಿಂದ ಸಾಧಿಸಿದ ರಾಷ್ಟ್ರೀಯ ಏಕೀಕರಣದ

ಸ್ಫೂರ್ತಿಯನ್ನು ಕಾಪಾಡುತ್ತೇನೆ, ರಾಷ್ಟ್ರೀಯ ಆಂತರಿಕ ಭದ್ರತೆಯನ್ನು ಖಾತ್ರಿಪಡಿಸಲು ನಾನು ನನ್ನದೆ ಆದ ಕೊಡುಗೆಯನ್ನು ನೀಡುತ್ತೇನೆ ಎಂದು ಒಮ್ಮನಸಿನಿಂದ ಪ್ರತಿಜ್ಞೆ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವಾಲಯದ ಅಧಿಕಾರಿಗಳು ಹಾಗೂ ನೌಕರರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಬೆಂಗಳೂರು ನಗರಾಭಿವೃದ್ಧಿ ಸಚಿವ ಕೆ.ಜೆ.ಜಾರ್ಜ್, ಮುಖ್ಯಮಂತ್ರಿಯವರ ರಾಜಕೀಯ ಸಲಹೆಗಾರರಾದ ಗೋವಿಂದರಾಜ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಕೆ. ರತ್ನಪ್ರಭ, ಸರ್ಕಾರ ಅಪರ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಾದ ವಿಜಯಭಾಸ್ಕರ್, ಮುಖ್ಯಮಂತ್ರಿ ಅವರ ಪ್ರಧಾನ ಕಾರ್ಯದರ್ಶಿಗಳಾದ ಡಾ. ಎಲ್.ಕೆ. ಅತೀಕ್ ಸೇರಿದಂತೆ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು ಹಾಗೂ ಸಚಿವಾಲಯದ ನೌಕರರು ಉಪಸ್ಥಿತರಿದ್ದರು.

ಎಸ್‍ಎಂ;ಕೆಪಿಪಿ:ಜಿಪಿಆರ್.

ಸಂಖ್ಯೆ 242/362

# <u>ವಿಧಾನ ಪರಿಷತ್ ಉಪ ಸಭಾಪತಿಯವರಿಂದ</u>
# <u>ರಾಜ್ಯೋತ್ಸವ ಶುಭಾಶಯ</u>

ಬೆಂಗಳೂರು, ಅಕ್ಟೋಬರ್ 31 (ಕರ್ನಾಟಕ ವಾರ್ತೆ)

ಕನ್ನಡಾಂಬೆಯು ಕನ್ನಡ ನಾಡಿನ ಸಮಸ್ತ ಜನತೆಗೆ ಸುಖ, ಶಾಂತಿ, ಸಂತೋಷ, ಸಕಲ ಸಂಪತ್ತು, ನೆಮ್ಮದಿ ನೀಡಲೆಂದು ಹಾರೈಸುತ್ತಾ, ಕನ್ನಡ ನಾಡಿನ ಜನತೆಗೆ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳನ್ನು ವಿಧಾನ ಪರಿಷತ್ತಿನ ಉಪ ಸಭಾಪತಿಗಳಾದ ಮರಿತಿಬ್ಬೇಗೌಡ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಎಸ್‍ಎಂ;ಕೆಪಿಪಿ:ಜಿಪಿಆರ್.

ಸಂಖ್ಯೆ 243/363

# ಐ.ಎ.ಎಸ್. ಅಧಿಕಾರಿ ಕೆ.ಪಿ. ಕೃಷ್ಣನ್ ಅವರಿಗೆ ಐ.ಐ.ಎಂ.ಬಿ. ಪ್ರಶಸ್ತಿ

ಬೆಂಗಳೂರು, ಅಕ್ಟೋಬರ್ 31 (ಕರ್ನಾಟಕ ವಾರ್ತೆ)

ಭಾರತ ಸರ್ಕಾರದ ಕೌಶಾಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ ಕಾರ್ಯದರ್ಶಿ ಶ್ರೀ ಕೆ.ಪಿ. ಕೃಷ್ಣನ್ ಅವರು ಇತ್ತೀಚೆಗೆ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್‌ನ ಮ್ಯಾನೇಜ್‌ಮೆಂಟ್‌ನ ಸಂಸ್ಥಾಪಕರ ದಿನಾಚರಣೆ ಸಮಾರಂಭದಲ್ಲಿ ಡಿಸ್ಟಿಂಗ್‌ವಿಶ್ಡ್ ಅಲ್ಯೂಮಿನಿ  ಅವಾರ್ಡ್ 2017 ಪ್ರಶಸ್ತಿಯನ್ನು ಸ್ವೀಕರಿಸಿದರು.

ಇವರು 1983 ರ ಕರ್ನಾಟಕ ಕೇಡರ್ ಐ.ಎ.ಎಸ್. ಅಧಿಕಾರಿಯಾಗಿದ್ದು ಪ್ರಸ್ತುತ ಕೇಂದ್ರ ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.